ಕೊಲೆಯನ್ನು ಯಾರು ಮಾಡುತ್ತಿದ್ದಾರೆ, ಅಂಥವರನ್ನು ಗುಂಡಿಕ್ಕಿ ಕೊಲ್ಲಬೇಕು. ಇನ್ನತ್ತಿನ ದಿನಸ ನರ ದಕ್ಷಿಣೆಯ ಪಿಡುಗು ಬೃಹದಾಕಾರವಾಗಿ ಬೆಳೆಯುತ್ತಿದೆ. ಹೆಣ್ಣು ಮಕ್ಕಳು ಮೆರವಣಿಗೆ ನಡೆಸಿದ್ದಾರೆ ನಗರ ಸಭಾ ಉಪಾಧ್ಯಕ್ಷೆಯವರು ಮತ್ತು ಇತರ ಸಂಘ ಸಂಸ್ಥೆಗಳವರೆಲ್ಲರೂ ಸೇರಿ ಮೆರವಣಿಗೆ ನಡೆಸಿದ್ದಾರೆ. ಇದೇ ರೀತಿ ಮುಂದುವರಿದರೆ ಸರ್ಕಾರದ ಮೇಲೂ ಕೂಡ ಉಗ್ರವಾದ ಹೋರಾಟಕ್ಕೆ ತಯಾರಾಗುತ್ತಾರೆ. ಇದನ್ನು ಮಾನ್ಯ ಸಚಿವರು ಪೋಲೀಸ್ ಇಲಾಖೆಯಿಂದ ಸರಿಯಾದ ತನಿಖೆ ನಡೆಸಿ ಆದಕ್ಕೆ ಸಂಬಂಧಪಟ್ಟವರೆಲ್ಲರಿಗೂ ಕೂಡ ಶಿಕ್ಷೆ ಆಗುವಂತೆ ಕ್ರಮ ಕೈಗೊಳ್ಳಬೇಕು, ಮಹಿಳೆಯರಿಗೆ ಆಗತಕ್ಕ ಅನ್ಯಾಯವನ್ನು ಖಂಡಿಸುತ್ತಾ ಇದನ್ನು ತಪ್ಪಿಸುವುದಕ್ಕೆ ಒಂದು ಕಾಯಿದೆಯನ್ನು ತರಬೇಕೆಂದು ಈ ಸದನದ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿಗಜಿಣಗಿ ರಮೇಶ್ ಚಂದಪ್ಪ (ಗೃಹ ಇಲಾಖೆಯ ಸಚಿವರು) --ಮಾನ್ಯ ಸಭಾಧ್ಯಕ್ಷರೇ, ಯಶೋದಮ್ಮನ ಕೊಲೆಯ ಪ್ರಕರಣವನ್ನು ಸದನದಲ್ಲಿ ಸರ್ಕಾರದ ಗಮನಕ್ಕೆ ತಂದಿದಾರೆ. ಈಗಾಗಲೇ ದಾವಣಗೆರೆಯ ಪೋಲೀಸ್ ಸ್ಟೇಷನ್‌ನಲ್ಲಿ ಈ ಕೇಸ್ ರಿಜಿಸ್ಟರ್ ಆಗಿದ್ದು ಆರೋಪಿಯನ್ನು ಅರೆಸ್ಟ್ ಮಾಡಿ ಜ್ಯುಡಿಸಿಯಲ್ ಕಸ್ಟಡಿಗೆ ಒಪ್ಪಿಸಿದ್ದೇವೆ. ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ತಿಳಿಸುತ್ತೇನೆ.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಆಕೆಗೆ 5 ವರ್ಷದ ಮತ್ತು 3 ವರ್ಷದ ಮಕ್ಕಳಿದ್ದಾರೆ. ಆ ಮಕ್ಕಳಿಗೆ ಏನಾದರೂ ಪರಿಹಾರ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ, ಮತ್ತು ಆ ಹೆಣ್ಣು ಮಗಳು ಬರೆದಿರತಕ್ಕ ಎಲ್ಲಾ ಪತ್ರಗಳನ್ನು ತಮಗೆ ಈಗ ಕಳುಹಿಸಿಕೊಡುತ್ತೇನೆ.

(vii) ಹುನ್ನುಬಾದ್ ತಾಲ್ಲೂಕಿನ ನರಸರೆಡ್ಡಿ ಎಂಬುನರ ಹೆಂಡತಿ ಶ್ರೀಮತಿ ಜಗದಾಂಬ ಎಂಬುವರ ಕೊಲೆಯ ಬಗ್ಗೆ

ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್).—ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಹಿರಿಯ ಸದಸ್ಯರಾದ ಪಂಪಾಪತಿಯವರು ಹೇಳಿದಹಾಗೆ ದಾವಣಗೆರೆಯಲ್ಲಿ ಯಾವ ಒಂದು ಹೆಣ್ಣುಮಗಳ ಕೊಲೆ ಪ್ರಕರಣ ನಡೆಯಿತು ಅದೇ ರೀತಿ ಬೀದರ್ ಜಿಲ್ಲೆಯ ಹುನ್ನಾಬಾದ್ ತಾಲ್ಲೂಕ್ ಮೇಗಲ್ ಬೀದಂ ಗ್ರಾಮದಲ್ಲಿ ಜಗದಾಂಬ ಎಂಬ 21 ವರ್ಷದ ಹುಡುಗಿಯನ್ನು ವರದಕ್ಷಿಣೆಯ ಸಲುವಾಗಿ ಕೊಲೆ ಮಾಡಲಾಗಿದೆ. ಇದರ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ. ಇದಲ್ಲದೇ ನಮ್ಮ ಜಿಲ್ಲೆಯಲ್ಲಿ ಒಂದು ವರ್ಷದಲ್ಲಿ ಇದೇರೀತಿ 6 ಪ್ರಕರಣಗಳು ಆಗಿವೆ, ಅದರ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜಿಗಜಿಂಗಿ ರಮೇಶ್ ಚಂದ್ರಪ್ಪ.—ಅಧ್ಯಕ್ಷರೇ, ಸದಸ್ಯರು ಈ ವಿಚಾರದಲ್ಲಿ ಸರ್ಕಾರದ ಗಮನವನ್ನು ಸೆಳೆದಿದಾರೆ. ಈ ಕೊಲೆ ಆಗಿರತಕ್ಕ ಘಟನೆಯ ಬಗ್ಗೆ ಸವಿಸ್ತಾರವಾದ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ. ಕಾಯಿದೆ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇನೆ.

Papers Laid On The Table

SRI. A. LAKSHMISAGAR (Minister for Law and Parlimentary Affairs, Housing and Public Grievances).—Sir, I beg to lay.

"The Karnataka Sales Tax (Amendment) Rules, 1984 as required under section 39 of the Karnataka Sales Tax Act, 1957".

MR. SPEAKER --PAPER LAID.

ಗಮನ ಸೆಳೆಯುವ ಸೂಚನೆ

(i) ಕೊಟ್ಟೂರಿನಲ್ಲಿ ಬೆಂಕಿ ಬಿದ್ದು ಹತ್ತಿ ಅಂಗಡಿ ಸುಟ್ಟುಹೋದ ಬಗ್ಗೆ :

ಶ್ರೀ ಕೆ ಚನ್ನಬಸವನನಗೌಡ (ಕೂಡ್ಲಿಗಿ).—ಆಕಸ್ಮಿಕ ಬೆಂಕಿಯಿಂದ ಬಳ್ಳಾರಿ ಜಿಲ್ಲೆಯಲ್ಲಿರುವ ಕೊಟ್ಟೂರು ಗ್ರಾಮದಲ್ಲಿ ಅಂಡಿಗೆ ಹತ್ತಿ ಸುಟ್ಟಿರುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.